AICCTU

ALL INDIA CENTRAL COUNCIL OF TRADE UNIONS

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014 / 9483191035

**14.12.2020**

ಇವರಿಗೆ,

1. ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ವಿಧಾನ ಸೌಧ ಬೆಂಗಳೂರು
2. ಕಾರ್ಮಿಕ ಸಚಿವರು, ಕರ್ನಾಟಕ, ವಿಧಾನಸೌಧ ಬೆಂಗಳೂರು
3. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಕಾರ್ಮಿಕ) ಕರ್ನಾಟಕ ಸರ್ಕಾರ ಬೆಂಗಳೂರು
4. ಕಾರ್ಮಿಕ ಆಯುಕ್ತರು, ಕಾರ್ಮಿಕ ವಿಭಾಗ, ಕರ್ನಾಟಕ

ಮಾನ್ಯರೆ,

ವಿಷಯ : ನರಸಾಪುರದ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆಯನ್ನು ಕುರಿತ ವರದಿ ಸಲ್ಲಿಕೆ ಮತ್ತು ಕೈಗಾರಿಕಾ ಶಾಂತಿಯನ್ನು ಕಾಪಾಡಲು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತ ಸಲಹೆಗಳು.

12.12.2020ರಂದು ಕೋಲಾರ ಜಿಲ್ಲೆಯ ನರಸಾಪುರದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ವಿಸ್ಟ್ರಾನ್ ಕಾರ್ಖಾನೆಯ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ನಡೆದ ಘಟನೆಗಳನ್ನು ಕುರಿತು ಅಧ್ಯಯನ ನಡೆಸಲು ಎಐಸಿಸಿಟಿಯು ತಂಡ ಸ್ಥಳಕ್ಕೆ ಭೇಟಿ ನೀಡಿತ್ತು. ಈ ಘಟನೆಯಲ್ಲಿ ಕಾರ್ಖಾನೆಯ ಆಸ್ತಿಪಾಸ್ತಿ ನಷ್ಟವಾಗಿದ್ದು, ಪೊಲೀಸರೂ ಸಹ ಕಾರ್ಮಿಕರ ಮೇಲೆ ದಾಳಿ ನಡೆಸಿರುವುದು ಕಂಡುಬಂದಿದೆ.

ಈ ಘಟನೆಯನ್ನು ಕುರಿತ ವರದಿಯೊಂದನ್ನು ಈ ಪತ್ರದೊಡನೆ ಲಗತ್ತಿಸಲಾಗಿದ್ದು, ಈ ವರದಿಯೊಂದಿಗೇ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಮತ್ತು ಕೈಗಾರಿಕಾ ಶಾಂತಿ ಸೌಹಾರ್ದತೆಯನ್ನು ರಕ್ಷಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಮ್ಮ ಸಲಹೆಗಳನ್ನೂ ನೀಡುತ್ತಿದ್ದೇವೆ.

ಇಂತಿ

ಪಿ ಪಿ ಅಪ್ಪಣ್ಣ

# AICCTU

**ALL INDIA CENTRAL COUNCIL OF TRADE UNIONS**

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: **9243190014** / 9483191035

## ಅಸಹಾಯಕ ಸ್ಥಿತಿಯಲ್ಲಿ ಕಾರ್ಮಿಕರು

12.12.2020ರಂದು ಕೋಲಾರ ಜಿಲ್ಲೆಯ ನರಸಾಪುರದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ವಿಸ್ಟ್ರಾನ್ ಕಾರ್ಖಾನೆಯ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ನಡೆದ ಘಟನೆಗಳನ್ನು ಕುರಿತು ಅಧ್ಯಯನ ನಡೆಸಲು ಎಐಸಿಸಿಟಿಯು ತಂಡ ಸ್ಥಳಕ್ಕೆ ಭೇಟಿ ನೀಡಿತ್ತು. ಈ ಘಟನೆಯಲ್ಲಿ ಕಾರ್ಖಾನೆಯ ಆಸ್ತಿಪಾಸ್ತಿ ನಷ್ಟವಾಗಿದ್ದು, ಪೊಲೀಸರೂ ಸಹ ಕಾರ್ಮಿಕರ ಮೇಲೆ ದಾಳಿ ನಡೆಸಿರುವುದು ಕಂಡುಬಂದಿದೆ.

ಕಾರ್ಖಾನೆಯ ಜಾಗವನ್ನು ಸಂಪೂರ್ಣವಾಗಿ ಪೊಲೀಸ್ ಪಡೆಗಳ ಮೂಲಕ ನಿರ್ಬಂಧಿಸಲಾಗಿದ್ದು ಸಾರ್ವಜನಿಕರಿಗೆ ಪ್ರವೇಶ ಇಲ್ಲದಂತಾಗಿದೆ. ಪೊಲೀಸರು ಕಾರ್ಖಾನೆಯ ಬಳಿಗೆ ಯಾರೂ ಸುಳಿಯದಂತೆ ಎಚ್ಚರ ವಹಿಸಿದ್ದಾರೆ. ಕಾರ್ಖಾನೆಯನ್ನು ತಲುಪುವ ರಸ್ತೆ ಬದಿಯಲ್ಲಿರುವ ಸಣ್ಣ ಪುಟ್ಟ ಹೋಟೆಲುಗಳು ಮತ್ತು ಅಂಗಡಿಗಳನ್ನು ನಮ್ಮ ಸಮ್ಮುಖದಲ್ಲೇ ಮುಚ್ಚಿಸಲಾಗಿದ್ದು, ಅಲ್ಲಿರುವ ಪೊಲೀಸರು ಕಾರ್ಖಾನೆಯ ರಸ್ತೆಯನ್ನೇ ಬಂದ್ ಮಾಡಿದ್ದು ಕಾರ್ಖಾನೆಯ ಬಳಿ ಯಾರೂ ಸುಳಿಯದಂತೆ ನೋಡಿಕೊಂಡಿದ್ದಾರೆ. ಆದರೆ ಕಾರ್ಖಾನೆಯ ಸುತ್ತಮುತ್ತಲು ವಾಸಿಸುವ ಜನರು ನಡೆದ ಘಟನೆಯ ಬಗ್ಗೆ ನೇರವಾಗಿ ತಮ್ಮ ಅಭಿಪ್ರಾಯವನ್ನು ತಾವು ಕಂಡಂತೆಯೇ ವಿವರಿಸುತ್ತಾರೆ. ನಾವು ಹಲವು ಹಳ್ಳಿಗಳಿಗೆ ಭೇಟಿ ನೀಡಿದ್ದು ವಿಸ್ಟ್ರಾನ್ ನಲ್ಲಿ ನೌಕರಿ ಮಾಡುತ್ತಿರುವ ಕಾರ್ಮಿಕರನ್ನು ಭೇಟಿಯಾಗಲು ಸಾಧ್ಯವಾಗಿತ್ತು. ಕಾರ್ಮಿಕರು ಮಾತನಾಡಲು ಭಯಪಡುತ್ತಿದ್ದು ಕಾರ್ಖಾನೆಯ ಸುತ್ತ ಇರುವ ಜನಸಾಮಾನ್ಯರೂ ಸಹ, ನೇರವಾಗಿ ಮಾತನಾಡಿದರೂ, ಈ ಪ್ರದೇಶದಲ್ಲಿ ಬೀಡುಬಿಟ್ಟಿರುವ ಪೊಲೀಸರ ಭೀತಿಯಿಂದ ಮುಕ್ತವಾಗಿ ಮಾತನಾಡಲು ಹಿಂಜರಿಯುತ್ತಾರೆ.

1. ಟೈವಾನ್ ಮೂಲದ ಬಹುರಾಷ್ಟ್ರೀಯ ಕಂಪನಿ ವಿಸ್ಟ್ರಾನ್ ನರಸಾಪುರದ ಕೈಗಾರಿಕಾ ಪ್ರದೇಶದಲ್ಲಿ ತನ್ನ ಉತ್ಪಾದನಾ ಘಟಕವನ್ನು ಹೊಂದಿದ್ದು, ಇಲ್ಲಿ ಆಪಲ್ ಇಂಕ್ ಕಂಪನಿಗಾಗಿ ಐಫೋನ್‌ಗಳನ್ನು ಸಿದ್ಧಪಡಿಸಲಾಗುತ್ತದೆ. ಲಾಕ್ ಡೌನ್ ನಂತರದಲ್ಲಿ ಕಾರ್ಯಾರಂಭ ಮಾಡಿದ ಈ ಕಾರ್ಖಾನೆಯು 1343 ಖಾಯಂ ನೌಕರರನ್ನು, 8490 ಗುತ್ತಿಗೆ ಕಾರ್ಮಿಕರನ್ನೂ ನೇಮಕ ಮಾಡಿಕೊಂಡಿದ್ದು, ಒಟ್ಟು ಆರು ಗುತ್ತಿಗೆದಾರರು ಈ ಕಾರ್ಮಿಕರನ್ನು ನೇಮಿಸಿದ್ದಾರೆ. ಇಲ್ಲಿರುವ ಕಾರ್ಮಿಕರ ಪೈಕಿ ಇಂಜಿನಿಯರಿಂಗ್ ಪದವೀಧರರು, ಐಟಿಐ ಡಿಪ್ಲೊಮಾ ಹೊಂದಿರುವವರು, ಹತ್ತನೆ ತರಗತಿ ಮತ್ತು ಪಿಯುಸಿ ವ್ಯಾಸಂಗ ಮುಗಿಸಿರುವವರು ಇದ್ದಾರೆ.
2. ಗುತ್ತಿಗೆ ಕಾರ್ಮಿಕರಲ್ಲಿ ಮೂರು ವರ್ಗಗಳಿವೆ. (ಎ) ತಮಿಳುನಾಡು, ಆಂಧ್ರ ಪ್ರದೇಶ, ಬಿಹಾರ ಮತ್ತಿತರ ರಾಜ್ಯಗಳಿಂದ ವಲಸೆ ಬಂದಿರುವ ಕಾರ್ಮಿಕರು, (ಬಿ) ಕರ್ನಾಟಕದ ಇತರ ಜಿಲ್ಲೆಗಳಿಂದ ಬಂದಿರುವ ವಲಸೆ ಕಾರ್ಮಿಕರು (ಸಿ) ನರಸಾಪುರ ಸುತ್ತಲಿನ ತಾಲೂಕು ಮತ್ತು ಹಳ್ಳಿಗಳಿಂದ ಬಂದಿರುವ ಕಾರ್ಮಿಕರು. ಹೊಸಕೋಟೆ ಮತರ್ತು ಬೆಂಗಳೂರಿನಿಂದಲೂ ಈ ಕಾರ್ಖಾನೆಯಲ್ಲಿ ದುಡಿಮೆ ಮಾಡಲು ಕಾರ್ಮಿಕರು ಬರುವುದಾಗಿ ಹೇಳಲಾಗಿದೆ.

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014 / 9483191035

3. ಇತರ ರಾಜ್ಯಗಳಿಂದ ಮತ್ತು ಜಿಲ್ಲೆಗಳಿಂದ ಬಂದಿರುವ ವಲಸೆ ಕಾರ್ಮಿಕರು ನರಸಾಪುರ ಪಟ್ಟಣದಲ್ಲಿ ಮತ್ತು ನೆರೆಹೊರೆಯಲ್ಲಿರುವ ಗ್ರಾಮಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಾರೆ. ಇತರ ವಲಸೆ ಕಾರ್ಮಿಕರು ತಮ್ಮ ಕುಟುಂಬಗಳೊಡನೆ ನರಸಾಪುರವನ್ನೂ ಸೇರಿದಂತೆ, ಬಂಗಾರಪೇಟೆ, ಮುಳಬಾಗಿಲು ಮತ್ತಿತರ ತಾಲೂಕು ಮತ್ತು ಹಳ್ಳಿಗಳಲ್ಲಿ ವಾಸಿಸುತ್ತಾರೆ. ವಲಸೆ ಕಾರ್ಮಿಕರಲ್ಲಿ ಕಾಣಬಹುದಾದ ಒಂದು ಲಕ್ಷಣ ಎಂದರೆ, ಪುರುಷರು ಮಹಿಳೆಯರು ಎಲ್ಲರೂ ಯೌವ್ವನದಲ್ಲಿರುವವರು.
4. ಇವರು ತಮ್ಮ ನೌಕರಿಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ವಿಸ್ಟ್ರಾನ್ ಕಂಪನಿಯ ಅಧಿಕಾರಿಗಳು ಸಂದರ್ಶನ ನಡೆಸಿದ್ದಾರೆ. ಸಂದರ್ಶನದಲ್ಲಿ ತೇರ್ಗಡೆಯಾದ ಗುತ್ತಿಗೆ ಕಾರ್ಮಿಕರನ್ನು ಆರು ಗುತ್ತಿಗೆದಾರರ ಪೈಕಿ ಒಬ್ಬರಿಗೆ ಒಪ್ಪಿಸಲಾಗಿದ್ದು, ಈ ಗುತ್ತಿಗೆದಾರರೇ ನೇಮಕಾತಿ ಆದೇಶವನ್ನು ನೀಡಿದ್ದಾರೆ. ಈ ಕಾರ್ಮಿಕರನ್ನು ಗುತ್ತಿಗೆದಾರರೇ ನೇಮಿಸಿದ್ದಾರೆ ಎಂತಲೂ, ಇವರನ್ನು ಬೇರೆ ಪ್ರದೇಶಗಳಲ್ಲಿರುವ ಕಾರ್ಖಾನೆಗಳಿಗೆ ರವಾನಿಸಬಹುದು ಎಂದೂ ಈ ಆದೇಶದಲ್ಲಿ ಹೇಳಲಾಗಿದ್ದರೂ, ಎಲ್ಲರೂ ಕೇವಲ ವಿಸ್ಟ್ರಾನ್ ಕಾರ್ಖಾನೆಯಲ್ಲಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ವಿಸ್ಟ್ರಾನ್ ನಲ್ಲಿ ನೌಕರಿಯಲ್ಲಿರುವ ಯಾವುದೇ ಕಾರ್ಮಿಕರನ್ನೂ ಇತರ ಪ್ರದೇಶಗಳಲ್ಲಿನ ಕಾರ್ಖಾನೆಗಳಿಗೆ ಕೆಲಸ ಮಾಡಲು ರವಾನೆ ಮಾಡಿರುವ ಪ್ರಸಂಗಗಳು ಕಂಡುಬಂದಿಲ್ಲ. ಎಲ್ಲ ಕಾರ್ಮಿಕರೊಡನೆಯೂ ವಿಸ್ಟ್ರಾನ್ ಅಧಿಕಾರಿಗಳೇ ಸಂದರ್ಶನ ನಡೆಸಿದ್ದು, ಈ ಅಧಿಕಾರಿಗಳ ನಿರ್ದೇಶನದಂತೆಯೇ, ಅವರ ನಿಯಂತ್ರಣದಲ್ಲೇ ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ನೇಮಕಾತಿ ಆದೇಶವನ್ನು ಕಾರ್ಮಿಕರಿಗೆ ನೀಡುವುದು ಮತ್ತು ವೇತನ ಪಾವತಿ ಮಾಡುವುದನ್ನು ಹೊರತುಪಡಿಸಿ ಗುತ್ತಿಗೆದಾರರು ಮತ್ತಾವುದೇ ಪಾತ್ರ ವಹಿಸುವುದಿಲ್ಲ. ಕಾರ್ಮಿಕರ ನೇಮಕಾತಿ ಆದೇಶಗಳಲ್ಲಿ, ನೌಕರಿಗೆ ಸಂಬಂಧಪಟ್ಟ ಎಲ್ಲ ನಿರ್ದೇಶನಗಳನ್ನೂ ಕಾರ್ಖಾನೆಯ ಮೇಲ್ವಿಚಾರಕರೇ ನೀಡುತ್ತಾರೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಗುತ್ತಿಗೆದಾರರು ಕೇವಲ ನೆಪಮಾತ್ರದ ಹೆಸರು ಸೂಚಿಸುವವರಾಗಿರುವುದು ಸ್ಪಷ್ಟವಾಗುತ್ತದೆ. ಖಾಯಂ ನೌಕರರಿಗೆ ಒದಗಿಸಬೇಕಾದ ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು ತಪ್ಪಿಸುವ ಸಲುವಾಗಿಯೇ ವಿಸ್ಟ್ರಾನ್ ಕಂಪನಿ ಈ ರೀತಿಯ ಅಕ್ರಮ ಮಾರ್ಗವನ್ನು ಅನುಸರಿಸುತ್ತಿರುವುದು ಸ್ಪಷ್ಟ.
5. ಇಲ್ಲಿನ ಕಾರ್ಮಿಕ ವರ್ಗ ಯುವ ವಯಸ್ಸಿನದ್ದಾಗಿದ್ದು, 26 ವರ್ಷಕ್ಕೂ ಮೇಲ್ಪಟ್ಟ ಕಾರ್ಮಿಕರ ಎಲ್ಲ ಅರ್ಜಿಗಳನ್ನೂ ವಿಸ್ಟ್ರಾನ್ ಅಧಿಕಾರಿಗಳು ತಿರಸ್ಕರಿಸಿದ್ದಾರೆ ಎಂದು ಹೇಳಲಾಗುತ್ತದೆ.
6. ವಿಶೇಷವಾಗಿ ಹತ್ತಿರದ ಹಳ್ಳಿಗಳಿಂದ ಬಂದಿರುವ ಕಾರ್ಮಿಕರು ತೀವ್ರ ಬಡತನದ ಹಿನ್ನೆಲೆಯನ್ನು ಹೊಂದಿದ್ದು ಬಹುಪಾಲು ಕಾರ್ಮಿಕರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕಾಲೇಜುಗಳನ್ನು ಮುಚ್ಚಲಾಗಿದ್ದರಿಂದ ಇವರಲ್ಲಿ ಅನೇಕರು ಕಾರ್ಖಾನೆಯ ಕೆಲಸಕ್ಕೆ ಸೇರಿಕೊಂಡಿದ್ದು , ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ತಮ್ಮ ಕುಟುಂಬಗಳ ಜೀವನ ನಿರ್ವಹಣೆಗೆ ನೆರವಾಗುವ ದೃಷ್ಟಿಯಿಂದಲೇ ಈ ನೌಕರಿಗೆ ಸೇರಿಕೊಂಡಿದ್ದಾರೆ. ಇವರ ನೇಮಕಾತಿಯ ಸಂದರ್ಭದಲ್ಲಿ ತಿಂಗಳಿಗೆ 22000/– ರೂಗಳ ವೇತನ ನೀಡುವುದಾಗಿ ಕಾರ್ಖಾನೆಯ ಆಡಳಿತ ವರ್ಗ ಆಶ್ವಾಸನೆ ನೀಡಿದ್ದು, ಹೆಚ್ಚುವರಿ ದುಡಿಮೆಯ ವೇತನವನ್ನೂ

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014/ 9483191035

ನೀಡುವುದಾಗಿ ಹೇಳಿದೆ. ಈ ಕಾರಣಕ್ಕಾಗಿಯೇ ಇಲ್ಲಿನ ಯುವಕ, ಯುವತಿಯರು ವಿಸ್ಟ್ರಾನ್ ಕಾರ್ಖಾನೆಯಲ್ಲಿ ನೌಕರಿಗೆ ಸೇರಿಕೊಂಡಿದ್ದಾರೆ.

7. ವಿಸ್ಟ್ರಾನ್ ಕಾರ್ಖಾನೆ ಎರಡು ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ ಆರು ಗಂಟೆಯವರೆಗೆ (ಬೆಳಗಿನ ಪಾಳಿ) ಮತ್ತು ಸಂಜೆ 6 ರಿಂದ ಬೆಳಗಿನ ಜಾವ 6 ಗಂಟೆಯವರೆಗೆ (ರಾತ್ರಿಪಾಳಿ) ನಡೆಸಲಾಗುತ್ತದೆ. ಐ ಫೋನ್ ಬಿಡಿ ಭಾಗಗಳನ್ನು ಜೋಡಿಸುವ ಕೆಲಸದಲ್ಲಿ ನೌಕರರ ಪ್ರತಿಯೊಂದು ಗುಂಪಿಗೂ ಒಂದು ಜೋಡಣೆಯ ಕೆಲಸವನ್ನು ನೀಡಲಾಗುತ್ತದೆ. ಕೆಲವು ಪ್ರದೇಶಗಳಿಂದ ಕಾರ್ಮಿಕರನ್ನು ಕಾರ್ಖಾನೆಗೆ ಕರೆತರಲು ವಾಹನ ಸೌಲಭ್ಯವನ್ನು ಒದಗಿಸಲಾಗಿದ್ದು, ಬಹುಪಾಲು ಕಾರ್ಮಿಕರು ತಮ್ಮ ಹಳ್ಳಿಗಳಿಂದ ಇಲ್ಲಿ ಬಂದು ನೆರೆದಿರುತ್ತಾರೆ. ಮೊದಲನೆಯ ಪಾಳಿಗೆ ಬರುವವರು ಕಾರ್ಮಿಕರು ಮುಂಜಾನೆ 4 ಗಂಟೆಗೇ ಎದ್ದು ರಾತ್ರಿ 8 ಗಂಟೆಗೆ ಮನೆ ತಲುಪುತ್ತಾರೆ.

8. ಇಲ್ಲಿನ ಕಾರ್ಯಕ್ಷೇತ್ರದ ಪರಿಸ್ಥಿತಿ ಚಿಂತಾಜನಕವಾಗಿ ಕಾಣುತ್ತದೆ. ಪ್ರತಿಯೊಬ್ಬ ನೌಕರನೂ ಕಡ್ಡಾಯವಾಗಿ 12 ಗಂಟೆಗಳ ಪಾಳಿಯಲ್ಲಿ , ಹಗಲು ಅಥವಾ ರಾತ್ರಿ ಕೆಲಸ ಮಾಡಬೇಕಿದ್ದು ಈ ಪಾಳಿಯನ್ನು ನಿರ್ಧರಿಸಲು ನೌಕರರಿಗೆ ಆಯ್ಕೆ ಇರುವುದಿಲ್ಲ. ಮಹಿಳೆಯರನ್ನೂ ರಾತ್ರಿ ಪಾಳಿಯಲ್ಲಿ ದುಡಿಮೆಯಲ್ಲಿ ತೊಡಗಿಸಲಾಗುತ್ತದೆ. ನಾಲ್ಕು ದಿನಗಳ ಕೆಲಸ ಮಾಡಿದರೆ ಕಾರ್ಮಿಕರಿಗೆ ಎರಡು ದಿನಗಳ ರಜೆ ದೊರೆಯುತ್ತದೆ. ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸುವ ಯಾವುದೇ ಆಡಳಿತ ಯಂತ್ರ ಲಭ್ಯವಿರುವುದಿಲ್ಲ. ವೇತನವನ್ನು ಕಡಿತಗೊಳಿಸುವುದು, ಬೇಕಾದಂತೆ ಇಷ್ಟ ಬಂದಾಗ ನೀಡುವುದು, ಇಷ್ಟ ಬಂದಷ್ಟು ಪಾವತಿ ಮಾಡುವುದು ಮುಂತಾದ ಸಮಸ್ಯೆಗಳನ್ನು ಇಲ್ಲಿನ ಕಾರ್ಮಿಕರು ವ್ಯಕ್ತಪಡಿಸುತ್ತಲೇ ಇದ್ದರೂ ಯಾವುದೇ ಪರಿಹಾರ ದೊರೆತಿಲ್ಲ. ಕಾರ್ಮಿಕರಿಗೆ ಮಾಸಿಕ 22000/- ರೂ ವೇತನ ನೀಡುವುದಾಗಿ ಭರವಸೆ ನೀಡಿದ್ದರೂ, ಹೆಚ್ಚುವರಿ ದುಡಿಮೆ ಮಾಡಿದ್ದಾಗ್ಯೂ ಸಹ ಪೂರ್ಣ ವೇತನವನ್ನು ನೀಡಲಾಗುತ್ತಿಲ್ಲ. ಅಷ್ಟೇ ಅಲ್ಲದೆ ಯಾವುದೇ ರಜೆಯ ಸೌಲಭ್ಯವಿಲ್ಲದೆ ಕಾರ್ಮಿಕರು ದಿನನಿತ್ಯ ದುಡಿಯುತ್ತಿದ್ದಾರೆ. ನವಂಬರ್ ತಿಂಗಳಿನ ವೇತನವನ್ನು ಪಾವತಿಸುವಂತೆ ಕಾರ್ಮಿಕರು ವಿನಂತಿಸುತ್ತಿದ್ದರೂ ಕಾರ್ಖಾನೆಯ ಆಡಳಿತ ಮಂಡಲಿ ಮನವಿಯನ್ನು ಲೆಕ್ಕಿಸದೆ ನಿರ್ಲಕ್ಷಿಸಿದೆ. ತಮ್ಮ ಹಾಜರಿ ಪುಸ್ತಕವನ್ನು ಮನಬಂದಂತೆ ಮಾರ್ಪಡಿಸುವ ಮೂಲಕ ಅನೇಕ ಕಾರ್ಮಿಕರಿಗೆ ಕಡಿಮೆ ವೇತನ ನೀಡಲಾಗುತ್ತಿದೆ. ಕಾನೂನು ಪ್ರಕಾರ ನೀಡಬೇಕಾದ ಹೆಚ್ಚುವರಿ ದುಡಿಮೆಯ ವೇತನವನ್ನು ಈವರೆಗೂ ಪಾವತಿ ಮಾಡದಿರುವುದು ಗಂಭೀರ ಪ್ರಮಾದವಾಗಿದ್ದು ಪ್ರತಿ ತಿಂಗಳೂ ಕಾರ್ಮಿಕರ ಖಾತೆಗಳಿಗೆ ಜಮಾ ಆಗುವ ವೇತನಗಳು ಕಡಿಮೆಯಾಗುತ್ತಲೇ ಇದೆ. ಕಾರ್ಖಾನೆಯಲ್ಲಿ ಯಾವುದೇ ಕಾರ್ಮಿಕ ಸಂಘಟನೆಗಳಿಲ್ಲವಾದ್ದರಿಂದ ತಮ್ಮ ಕುಂದುಕೊರತೆಗಳನ್ನು ಕಾರ್ಮಿಕರು ಕಂಪನಿಯ ಅಧಿಕಾರಿಗಳಿಗೆ ಸಲಿಸಿದ್ದಾರೆ ಆದರೆ ಯಾವುದಕ್ಕೂ ಕಿವಿಗೊಡಲಾಗಿಲ್ಲ. ಇದಕ್ಕೂ ಮುನ್ನ ಕೋಲಾರದ ಜಿಲ್ಲಾಧಿಕಾರಿಗಳನ್ನೂ ಸಂಪರ್ಕಿಸಲಾಗಿದ್ದು, 12 ಗಂಟೆಗಳ ಕಡ್ಡಾಯ ದುಡಿಮೆಯ ಬಗ್ಗೆ ಜಿಲ್ಲಾಧಿಕಾರಿ ಕಚೇರಿಯಿಂದ

ವಿಸ್ಟ್ರಾನ್ ಕಂಪನಿಗೆ ನೋಟಿಸ್ ಜಾರಿಮಾಡಲಾಗಿದೆ. ಆದರೆ ಈ ಸಂದೇಶದ ಪ್ರತಿ ಯಾವ ಕಾರ್ಮಿಕರ ಬಳಿಯೂ ಲಭ್ಯವಿಲ್ಲ.

9. 12.12.2020ರಂದು ಕಾರ್ಮಿಕರು ಸಿಬ್ಬಂದಿ ಇಲಾಖೆಯ ಅಧಿಕಾರಿಯನ್ನು ಸಂಪರ್ಕಿಸಿ ತಮ್ಮ ವೇತನ ಪಾವತಿ ಮಾಡುವಂತೆ ವಿನಂತಿಸಿದ್ದಾರೆ. ಆದರೆ ಇವರ ವಿನಂತಿಯನ್ನು ಆಲಿಸಲಾಗಿಲ್ಲ. ಇದು ರಾತ್ರಿ ಮತ್ತು ಬೆಳಿಗ್ಗೆಯ ಪಾಳಿಯ ನಡುವೆ ನಡೆದಿರುವ ವಿದ್ಯಮಾನ. ಒಮ್ಮೆಲೆ ಪರಿಸ್ಥಿತಿ ಕೈಮೀರಿಹೋಗಿದ್ದು ಕೆಲವು ಕಾರ್ಮಿಕರು ಕಂಪನಿಯ ಆಸ್ತಿಪಾಸ್ತಿಯ ಹಾನಿ ಮಾಡಿದ್ದಾರೆ. ಸಾರ್ವಜನಿಕ ವಲಯದಲ್ಲಿ ಲಭ್ಯವಿರುವ ವಿಡಿಯೋ ಚಿತ್ರಗಳ ಅನುಸಾರ ಕಾರ್ಮಿಕರು ಗಾಜಿನ ಕಿಟಕಿಗಳನ್ನು ಒಡೆದುಹಾಕಿದ್ದು, ವಾಹನಗಳನ್ನು ತಲೆಕೆಳಗು ಮಾಡಿರುವುದು, ಹಾನಿ ಮಾಡಿರುವುದು ಕಂಡುಬಂದಿದೆ. ನಂತರ ಪೊಲೀಸರು ಸ್ಥಳಕ್ಕೆ ಆಗಮಿಸಿ ಕಾರ್ಮಿಕರನ್ನು ಚದುರಿಸಿದ್ದಾರೆ. ಕೆಲವು ಕಾರ್ಮಿಕರು ಹೇಳುವಂತೆ, ಹೊರಗಿನಿಂದ ಕೆಲವು ವ್ಯಕ್ತಿಗಳು ಕಾರ್ಖಾನೆಯೊಳಗೆ ಬಂದು ಧ್ವಂಸ ಮಾಡಿದ್ದಾರೆ. ವಿಡಿಯೋ ಚಿತ್ರಣವನ್ನು ನೋಡಿದರೆ, ಬಹುಪಾಲು ಜನರು ಕೇವಲ ವೀಕ್ಷಕರಾಗಿ ಕಾಣುತ್ತಿದ್ದು, ಕೆಲವರು ಮಾತ್ರವೇ ಕಂಪನಿಯ ಆಸ್ತಿಪಾಸ್ತಿಗೆ ಹಾನಿ ಮಾಡಿರುವುದು ಕಂಡುಬರುತ್ತದೆ.

10. ಒಟ್ಟು 150 ಕಾರ್ಮಿಕರನ್ನು ಬಂಧಿಸಲಾಗಿದೆ ಎಂದು ವರದಿ ಮಾಡಲಾಗಿದೆಯಾದರೂ ಬಂಧಿತರನ್ನು ಕುರಿತಂತೆ ಯಾವುದೇ ಮಾಹಿತಿ ನೀಡಲಾಗಿಲ್ಲ. ಹೆಚ್ಚಿನ ಸಂಖ್ಯೆಯ ನೌಕರರು ವಲಸೆ ಕಾರ್ಮಿಕರಾಗಿದ್ದು, ಸಮೀಪದ ಹಳ್ಳಿಗಳ ಬಡಕುಟುಂಬಗಳಿಂದ ಬಂದಿರುವುದರಿಂದ ಕುಟುಂಬಗಳಿಗೆ ಮಾಹಿತಿ ನೀಡುವುದರಲ್ಲಿ ಕಾನೂನು ಪಾಲನೆ ಮಾಡಬೇಕಾಗಿರುವುದು ಕಂಪನಿಯ ಮತ್ತು ಪೊಲೀಸರ ಕರ್ತವ್ಯ. ಬಂಧಿತರು ಆರೋಪ ಸಾಬೀತಾಗುವವರೆಗೂ ನಿರಪರಾಧಿಗಳೇ ಆಗಿದ್ದು ಅವರನ್ನು ಹಾಗೆಯೇ ನೋಡಿಕೊಳ್ಳಬೇಕಿದೆ. ಇಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿದ್ದು ಕಾರ್ಮಿಕರು ಆತಂಕದಲ್ಲಿ ಬದುಕುತ್ತಿದ್ದಾರೆ. ಡಿಸೆಂಬರ್ 12ರ ಘಟನೆಯಲ್ಲಿ ಪಾಲ್ಗೊಳ್ಳದೆ ಹೋದರೂ ಪೊಲೀಸರು ಯಾವ ಸಮಯದಲ್ಲಾದರೂ ಬಂದು ಮನೆಯ ಬಾಗಿಲು ಬಡಿಯಬಹುದು ಎಂಬ ಆತಂಕದಲ್ಲಿ ಕಾರ್ಮಿಕರು ದಿನ ಕಳೆಯುತ್ತಿದ್ದಾರೆ. ಅನೇಕ ಕಾರ್ಮಿಕರು ತಮ್ಮ ಮೊಬೈಲ್ ಫೋನುಗಳನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದು, ಯಾವುದೇ ವಿಚಾರಕ್ಕೂ ಮತ್ತೊಬ್ಬರೊಡನೆ ಸಂಪರ್ಕ ಹೊಂದಿಲ್ಲ.

11. ರಾಜ್ಯ ಸರ್ಕಾರವು ಕಂಪನಿಯ ಆಸ್ತಿಪಾಸ್ತಿಗೆ ಹಾನಿ ಮಾಡಿರುವುದನ್ನು ಖಂಡಿಸಿದೆಯಾದರೂ ಕಾರ್ಮಿಕರ ಬವಣೆಯ ಬಗ್ಗೆ ಯಾವುದೇ ಅನುಕಂಪ ವ್ಯಕ್ತಪಡಿಸಿಲ್ಲ. 12–12–2020ರಂದು ನಡೆದ ಘಟನೆಗಳು ಶೋಷಣೆಗೊಳಗಾದ, ಅಸಂಘಟಿತ ಕಾರ್ಮಿಕರ ಹತಾಶೆ ಮತ್ತು ಆಕ್ರೋಶದ ಪರಿಣಾಮವಾಗಿದ್ದು, ತಮ್ಮ ಕುಂದುಕೊರತೆಗಳನ್ನು ನಿವಾರಿಸಲು ಯಾವುದೇ ಮಾರ್ಗ ಕಾಣದೆ ಈ ದಾಂಧಲೆಯಲ್ಲಿ ತೊಡಗಿದ್ದಾರೆ. ವೇತನವನ್ನು ನೀಡಲಾಗಿಲ್ಲ, ಸ್ವೇಚ್ಛಾನುಸಾರವಾಗಿ ಕಡಿತಗೊಳಿಸಲಾಗಿದೆ. ಕಾರ್ಮಿಕರನ್ನು ಕಡ್ಡಾಯವಾಗಿ 12 ಗಂಟೆಯ ದುಡಿಮೆ ಪಾಳಿಯಲ್ಲಿ ಕೆಲಸ ಮಾಡುವಂತೆ ಒತ್ತಡ ಹೇರಲಾಗಿದೆ. ರಾಜ್ಯ ಸರ್ಕಾರ ಮತ್ತು ಕಾರ್ಮಿಕ ಇಲಾಖೆ ಕಾರ್ಮಿಕರ ಈ ಸಂಕಷ್ಟಗಳಿಗೆ ಸ್ಪಂದಿಸದಿದ್ದುದು ಮತ್ತು ಕಾರ್ಮಿಕರಲ್ಲಿ ತಮ್ಮ

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: **9243190014**/ 9483191035

ಕಷ್ಟಕ್ಕೆ ನೆರವಾಗುವವರು ಯಾರೂ ಇಲ್ಲ ಎನ್ನುವ ಹತಾಶೆ ಹೆಚ್ಚಾಗಿರುವುದು, ನೇಮಕಾತಿ ಆದೇಶ ನೀಡಿದ ಗುತ್ತಿಗೆದಾರರು ಲಭ್ಯವಾಗದಿರುವುದು ಮತ್ತು ವಿಸ್ಟ್ರಾನ್ ಆಡಳಿತ ಮಂಡಲಿ ನೌಕರರ ದನಿಯನ್ನು ಆಲಿಸದೆ ಇರುವುದು, ಇವೆಲ್ಲ ಕಾರಣಗಳಿಂದ ಒತ್ತಡದ ಸನ್ನಿವೇಶ ಒಮ್ಮೆಲೆ ಸ್ಫೋಟಿಸಿದ್ದು ಈ ಹಿಂಸಾತ್ಮಕ ಘಟನೆಯಲ್ಲಿ ಪರ್ಯವಸಾನ ಹೊಂದಿದೆ. ವಿಶ್ವದ ಅತ್ಯಂತ ದುಬಾರಿ ಐಫೋನ್ ತಯಾರಿಸುವ ಕಂಪನಿಯೊಂದು ತನ್ನ ಬೆವರು ಗೂಡುಗಳಂತಹ ಕಾರ್ಖಾನೆಯಲ್ಲಿ ಎಷ್ಟು ಶೋಷಣೆಗೆ ಅವಕಾಶ ಮಾಡಿಕೊಡಲು ಸಾಧ್ಯ ಎನ್ನುವ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ರಾಜ್ಯ ಸರ್ಕಾರ ಮತ್ತು ಕಾರ್ಮಿಕ ಇಲಾಖೆ, ಕೈಗಾರಿಕಾ ವಲಯದಲ್ಲಿ ಸಾಮಾನ್ಯವಾಗಿರುವ ಈ ಶೋಷಣೆ ತಮ್ಮ ಗಮನಕ್ಕೇ ಬಂದಿಲ್ಲ ಎಂದು ಹೇಗೆ ಹೇಳಲು ಸಾಧ್ಯ ?

12. ಪ್ರಾಸಂಗಿಕವಾಗಿ, ಪತ್ರಿಕಾ ವರದಿಗಳ ಅನುಸಾರ [1] , ಆಪಲ್ ಇಂಕ್ ಪರವಾಗಿ ಗುತ್ತಿಗೆಯ ಆಧಾರದ ಮೇಲೆ ಐಫೋನ್ ಉತ್ಪಾದಿಸುವ ವಿಸ್ಟ್ರಾನ್ ಕಂಪನಿ ಸರಬರಾಜು ನಿಯಮಗಳನ್ನು ಪಾಲಿಸುತ್ತಿರುವುದೋ ಇಲ್ಲವೋ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದೆ. ಈ ಮಾರ್ಗದರ್ಶಿ ನಿಯಮಗಳ ಅನುಸಾರ ಸಿಬ್ಬಂದಿ ನೇಮಕ ಮಾಡುವ ಮೂರನೆಯ ಸಂಸ್ಥೆಯು ಕಾರ್ಮಿಕರಿಗೆ ವೇತನ ಮತ್ತು ಇತರ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವ ಜವಾಬ್ದಾರಿ ಹೊಂದಿರುತ್ತದೆ. ಒಪ್ಪಿಗೆಯಾದ ವೇತನ ಪಾವತಿಯಲ್ಲಿ ಏನಾದರೂ ವ್ಯತ್ಯಾಸವಾಗಿದೆಯೇ ಎನ್ನುವುದರ ಬಗ್ಗೆ ಆಪಲ್ ಕಂಪನಿ ಪರಿಶೀಲನೆ ನಡೆಸುತ್ತಿರುವುದಾಗಿ ವರದಿಯಾಗಿದ್ದು, ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ದುಡಿಮೆಗೆ ನಿಯಮಾನುಸಾರ ವೇತನ ಪಾವತಿಯಾಗಿದೆಯೇ ಎಂದೂ ಪರಿಶೀಲಿಸಲಾಗುತ್ತಿದೆ.

13. ಮುಂದಿನ ಆದೇಶ ನೀಡುವವರೆಗೂ ಯಾರೂ ಕೆಲಸಕ್ಕೆ ಹಾಜರಾಗದಿರುವಂತೆ ಕಾರ್ಖಾನೆಯ ಮಾಲಿಕರಿಂದ ಕಾರ್ಮಿಕರಿಗೆ ಸಂದೇಶ ರವಾನೆಯಾಗುತ್ತಿದೆ. ಮತ್ತೊಂದೆಡೆ ಕಾರ್ಮಿಕರು ಪೊಲೀಸರ ದಾಳಿಯ ಬಗ್ಗೆಯೂ ಆತಂಕ ಹೊಂದಿದ್ದು ತಮಗೆ ಬಾಕಿ ಇರುವ ವೇತನ ಮತ್ತು ನೌಕರಿ ಎರಡನ್ನೂ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

14. ಈ ಸನ್ನಿವೇಶದಲ್ಲಿ ರಾಜ್ಯ ಸರ್ಕಾರ, ಕಾರ್ಮಿಕ ಇಲಾಖೆ ಮತ್ತು ಪೊಲೀಸರು ಕೈಗೊಳ್ಳಬೇಕಾದ ಕ್ರಮಗಳು ಸಾಕಷ್ಟಿವೆ. ಇವುಗಳ ಸಾರಾಂಶವನ್ನು ಇಲ್ಲಿ ನೀಡಿದ್ದೇವೆ.

ಎ. ***ವೇತನ ಪಾವತಿಯಾಗದಿರುವುದು ಮತ್ತು ತಡವಾಗಿ ಪಾವತಿಯಾಗಿರುವುದು*** : ಕಾರ್ಮಿಕರಿಗೆ ನಿಗದಿತ ಸಮಯಕ್ಕೆ ಸರಿಯಾಗಿ ವೇತನ ಪಾವತಿ ಮಾಡುತ್ತಿರಲಿಲ್ಲ. 1936ರ ವೇತನ ಪಾವತಿ ಕಾಯ್ದೆಯ ಸೆಕ್ಷನ್ 5ರ ಅನ್ವಯ , 1000ಕ್ಕೂ ಹೆಚ್ಚು ನೌಕರರು ಇರುವ ಕೈಗಾರಿಕಾ ಉದ್ಯಮಗಳಲ್ಲಿ, ಪ್ರತಿಯೊಬ್ಬ ಕಾರ್ಮಿಕನಿಗೂ ಪ್ರತಿ ತಿಂಗಳ ಹತ್ತನೆಯ ತಾರೀಖಿನ ಒಳಗೆ ಆ ತಿಂಗಳಿನ ವೇತನ ಪಾವತಿಸಬೇಕು. ಆದರೆ ಇಲ್ಲಿ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ವೇತನ ಪಾವತಿಸಲಾಗುತ್ತಿಲ್ಲ, ಬಾಕಿ ವೇತನವನ್ನೂ ನೀಡಲಾಗುತ್ತಿಲ್ಲ. ಇದು 1936ರ ವೇತನ ಪಾವತಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದ್ದು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: **9243190014** / 9483191035


ಬಿ. *ಕನಿಷ್ಟ ವೇತನ ಪಾವತಿ ಮಾಡದಿರುವುದು ಮತ್ತು ಹೆಚ್ಚುವರಿ ದುಡಿಮೆಯ ವೇತನ ನೀಡದಿರುವುದು* : 1948ರ ಕನಿಷ್ಟ ವೇತನ ಕಾಯ್ದೆಯ ಅನುಸಾರ ಎಲ್ಲ ಕಾರ್ಮಿಕರಿಗೂ ಕನಿಷ್ಟ ವೇತನ ನೀಡಬೇಕು. ಕಾರ್ಖಾನೆ ಕಾಯ್ದೆಯ ಸೆಕ್ಷನ್ 59ರ ಅನ್ವಯ ಹೆಚ್ಚುವರಿ ಅವಧಿಯ ದುಡಿಮೆಗೆ ಹೆಚ್ಚಿನ ವೇತನ ನೀಡುವುದೇ ಅಲ್ಲದೆ, ಯಾವುದೇ ಕಾರ್ಮಿಕನು ಕಾರ್ಖಾನೆಯಲ್ಲಿ ಒಂಬತ್ತು ಗಂಟೆಗಿಂತಲೂ ಹೆಚ್ಚು ಅವಧಿ ದುಡಿಮೆ ಮಾಡಿದರೆ, ಒಂದು ವಾರದಲ್ಲಿ 48 ಗಂಟೆಗಳಿಗಿಂತಲೂ ಹೆಚ್ಚು ಅವಧಿ ದುಡಿಮೆ ಮಾಡಿದರೆ, ಅವರಿಗೆ ಸಾಮಾನ್ಯ ವೇತನದ ಎರಡು ಪಟ್ಟು ಹೆಚ್ಚಿನ ವೇತನವನ್ನು ಹೆಚ್ಚುವರಿ ಅವಧಿಯ ದುಡಿಮೆಗೆ, ನೀಡಬೇಕು. ಆದರೆ ಇಲ್ಲಿ ಒಂಬತ್ತು ಗಂಟೆಗಿಂತಲೂ ಹೆಚ್ಚಿನ ಅವಧಿ ದುಡಿಮೆ ಮಾಡಲಾಗಿದ್ದರೂ ಹೆಚ್ಚುವರಿ ವೇತನ ಪಾವತಿ ಮಾಡಿಲ್ಲ. ಅಷ್ಟೇ ಅಲ್ಲದೆ ಕಾರ್ಖಾನೆಗಳ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಕಾರ್ಮಿಕರನ್ನು ಹೆಚ್ಚುವರಿ ದುಡಿಮೆ ಮಾಡುವಂತೆ ಒತ್ತಡ ಹೇರಲಾಗಿದೆ. ಪಿಯುಡಿಆರ್ ಮತ್ತು ಭಾರತ ಸರ್ಕಾರದ ಮೊಕದ್ದಮೆ (ಎಐಆರ್ 1982 ಸರ್ವೋಚ್ಚ ನ್ಯಾಯಾಲಯ 1473)ಯಲ್ಲಿ ಸರ್ವೋಚ್ಚ ನ್ಯಾಯಾಲಯವು *" ಯಾವುದೇ ವ್ಯಕ್ತಿ ತನ್ನ ಶ್ರಮ ಅಥವಾ ಸೇವೆಯನ್ನು ವೇತನ ಪಡೆಯುವ ಉದ್ದೇಶದಿಂದ ಮತ್ತೊಬ್ಬರಿಗೆ ನೀಡಿ, ಕನಿಷ್ಟ ವೇತನಕ್ಕಿಂತಲೂ ಕಡಿಮೆ ದರದಲ್ಲಿ ಮಜೂರಿ ಪಡೆದಿದ್ದರೆ, ಅದು ಸಂವಿಧಾನದ ವಿಧಿ 23ರ ಅನ್ವಯ ಬಲಾತ್ಕಾರದ ದುಡಿಮೆ ಎನಿಸಿಕೊಳ್ಳುತ್ತದೆ. ಇಂತಹ ದುಡಿಮೆಗಾರರು ಸಂವಿಧಾನದ ವಿಧಿ 23ರ ಅಡಿ ತನ್ನ ಈ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ನ್ಯಾಯಾಲಯದ ಮೊರೆ ಹೋಗಬಹುದು. ತನಗೆ ಕನಿಷ್ಟ ವೇತನವನ್ನು ಕೊಡಿಸುವಂತೆ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿ ಪಡೆಯಬಹುದು. ಈ ರೀತಿ ವೇತನ ಪಾವತಿಸಿದರೆ ವಿಧಿ 23ರ ಉಲ್ಲಂಘನೆಯಿಂದ ಉದ್ಯಮಿ ಮುಕ್ತನಾಗಬಹುದು ಮತ್ತು ಬಲಾತ್ಕಾರದ ದುಡಿಮೆಯ ಆರೋಪದಿಂದ ಹೊರತಾಗಬಹುದು "* ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಬಲಾತ್ಕಾರದ ದುಡಿಮೆಯ ರೂಪದಲ್ಲಿ ಯಾವುದೇ ಕಾರ್ಮಿಕರ ಮೇಲೆಯೂ ಒತ್ತಡ ಹೇರದಿರುವಂತೆ ನಿಯಂತ್ರಿಸುವುದು ಸರ್ಕಾರದ ಹೊಣೆಯಾಗಿರುತ್ತದೆ. 1948ರ ಕಾರ್ಖಾನೆಗಳ ಕಾಯ್ದೆಯ ಸೆಕ್ಷನ್ 9ರ ಅನ್ವಯ ಕಾರ್ಮಿಕ ಪರಿಶೀಲನಾಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಗೊಳಪಡುವ ಕಾರ್ಖಾನೆಗಳಲ್ಲಿ ಈ ನಿಯಮಗಳನ್ನು ಅನುಸರಿಸಲಾಗುತ್ತಿರುವುದರ ಬಗ್ಗೆ ಕಾಳಜಿ ವಹಿಸಬೇಕು. ವೇತನ ಪಾವತಿ ಕಾಯ್ದೆಯ ಸೆಕ್ಷನ್14 ಮತ್ತು 1948ರ ಕನಿಷ್ಟ ವೇತನ ಕಾಯ್ದೆಯ ಸೆಕ್ಷನ್ 19ರಲ್ಲಿ ಪರಿಶೀಲನಾಧಿಕಾರಿಗಳಅಧಿಕಾರಗಳನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿದೆ. ಇದರೊಂದಿಗೆ ನಿಯಮ ಉಲ್ಲಂಘಿಸುವ ಕಾರ್ಖಾನೆಗಳಿಗೆ ಭೇಟಿ ನೀಡುವುದು ಮತ್ತು ಕಾನೂನು ಪಾಲನೆ ಮಾಡುವಂತೆ ಆದೇಶ ನೀಡುವ ಕರ್ತವ್ಯವನ್ನೂ ನಿಗದಿಪಡಿಸಲಾಗಿದೆ. ಆದರೆ ಈ ರೀತಿಯ ಯಾವುದೇ ಪರಿಶೀಲನೆ ನಡೆದಂತೆ ತೋರುವುದಿಲ್ಲ.

ಸಿ. *ಕಡ್ಡಾಯವಾದ 12 ಗಂಟೆ ಅವಧಿಯ ಕೆಲಸದ ಪಾಳಿ* : ಕಾರ್ಮಿಕರು ಬೇರಾವ ಆಯ್ಕೆಯೇ ಇಲ್ಲದೆ ದಿನಕ್ಕೆ 12 ಗಂಟೆ ಕಡ್ಡಾಯವಾಗಿ ದುಡಿಯಬೇಕಾಗುತ್ತದೆ. 1948ರ ಕಾರ್ಖಾನೆಗಳ ಕಾಯ್ದೆಯ ಸೆಕ್ಷನ್ 51ರ ಅನ್ವಯ ಹೆಚ್ಚುವರಿ ಅವಧಿಯ ದುಡಿಮೆಯನ್ನು ಕಡ್ಡಾಯ ಮಾಡುವಂತಿಲ್ಲ. ಕಾರ್ಮಿಕರ ಸಮ್ಮತಿಯೊಂದಿಗೆ ಮಾತ್ರ ದುಡಿಸಿಕೊಳ್ಳಬಹುದು.

AICCTU

ALL INDIA CENTRAL COUNCIL OF TRADE UNIONS

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014 / 9483191035

ಆದರೆ ಇಲ್ಲಿ ಪ್ರತಿದಿನ 12 ಗಂಟೆ ಕೆಲಸ ಮಾಡಲು ಕಾರ್ಮಿಕರ ಮೇಲೆ ಒತ್ತಡ ಹೇರಲಾಗುತ್ತಿದೆ.

ಡಿ. *ವಿವರಗಳನ್ನು ಪ್ರಕಟಿಸಲು ವಿಫಲ* : ವೇತನಕ್ಕೆ ಸಂಬಂಧಿಸದಂತೆ ಮಾಹಿತಿಯನ್ನು ಕಾರ್ಖಾನೆಗಳಲ್ಲಿ ಬಿತ್ತರಿಸಬೇಕು ಎಂದು ಕಾನೂನು ಹೇಳುತ್ತದೆ. 1958ರ ಕರ್ನಾಟಕ ಕನಿಷ್ಟ ವೇತನ ನಿಯಮಗಳು, 1963ರ ಕರ್ನಾಟಕ ವೇತನ ಪಾವತಿ ನಿಯಮಗಳ 7 ಮತ್ತು 9ನೆಯ ನಿಯಮಗಳು, ಕಾರ್ಖಾನೆಯ ಆವರಣದಲ್ಲಿ ಎಲ್ಲರಿಗೂ ಕಾಣುವಂತಹ ಜಾಗದಲ್ಲಿ ಈ ಕೆಳಕಂಡ ಮಾಹಿತಿಯನ್ನು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಬಿತ್ತರಿಸಬೇಕು ಎಂದು ಹೇಳುತ್ತವೆ :

- ನೌಕರಿಯಲ್ಲಿರುವ ವಿಭಿನ್ನ ವರ್ಗಗಳ ಕಾರ್ಮಿಕರಿಗೆ ನೀಡಲಾಗುವ ವೇತನದ ದರಗಳು.
- ದುಡಿಮೆಯ ಅವಧಿ.
- ವೇತನದ ಅವಧಿ.
- ಎರಡು ತಿಂಗಳ ಮುಂಚಿತವಾಗಿಯೇ ವೇತನ ಪಾವತಿ ಮಾಡುವ ದಿನಾಂಕವನ್ನು ಪ್ರಕಟಿಸುವುದು.
- ಕಾರ್ಖಾನೆಯ ವ್ಯಾಪ್ತಿಯಲ್ಲಿ ಇರುವ ಪರಿಶೀಲನಾಧಿಕಾರಿಗಳ ಹೆಸರುಗಳು.

ಈ ರೀತಿ ಬಿತ್ತರಿಸುವುದರಿಂದ ಕಾರ್ಮಿಕರಿಗೆ ತಾವು ದೂರು ಸಲ್ಲಿಸಬಹುದಾದ ಪರಿಶೀಲನಾಧಿಕಾರಿಗಳಹೆಸರು ತಿಳಿಯುತ್ತದೆ. ವಿವರಗಳೂ ಲಭ್ಯವಾಗುತ್ತದೆ. ಆದರೆ ಇಲ್ಲಿ ಆ ರೀತಿಯ ಯಾವುದೇ ವಿವರಗಳನ್ನು ಬಿತ್ತರಿಸಲಾಗಿಲ್ಲ. ಅಥವಾ ರಾಜ್ಯ ಸರ್ಕಾರ ಈ ಕಾರ್ಖಾನೆಯ ಪರಿಶೀಲನೆಗೆ ಯಾವುದೇ ಅಧಿಕಾರಿಯನ್ನು ನಿಯೋಜಿಸಿಲ್ಲ. ಇದು ಕಾರ್ಮಿಕರನ್ನು ಕಡೆಗಣಿಸಿದಂತಾಗುತ್ತದೆ. ಕಾರ್ಮಿಕರ ಸಾಂವಿಧಾನಿಕ, ಕಾನೂನಾತ್ಮಕ ಹಕ್ಕುಗಳನ್ನು ಕುರಿತ ಮಾಹಿತಿಯನ್ನು ಬಿತ್ತರಿಸುವುದು ಕೈಗಾರಿಕಾ ಉದ್ಯೋಗ ( ಹಾಲಿ ನಿರ್ದೇಶನಗಳು) ಕಾಯ್ದೆ 1946 ಮತ್ತಿತರ ನಿಯಮಗಳ ಅನುಸಾರ ಕಡ್ಡಾಯವಾಗಿರುತ್ತದೆ.

ಇ. *ಕುಂದುಕೊರತೆಗಳನ್ನು ಆಲಿಸಿ ನಿವಾರಿಸಲು ಯಾವುದೇ ಸಾಂಸ್ಥಿಕ ಆಡಳಿತ ಯಂತ್ರಗಳಿಲ್ಲ* : 1947ರ ಕೈಗಾರಿಕಾ ವಿವಾದಗಳ ಕಾಯ್ದೆಯ ಅನುಸಾರ 100ಕ್ಕಿಂತಲೂ ಹೆಚ್ಚಿನ ಕಾರ್ಮಿಕರು ಇರುವ ಯಾವುದೇ ಕೈಗಾರಿಕೋದ್ಯಮವು ಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡ ಮತ್ತು ಮಾಲಿಕರ ಪ್ರತಿನಿಧಿಗಳನ್ನೊಳಗೊಂಡ ಕ್ರಿಯಾ ಸಮಿತಿಯೊಂದನ್ನು ರಚಿಸುವುದು ಕಡ್ಡಾಯವಾಗಿರುತ್ತದೆ. ಈ ಕ್ರಿಯಾ ಸಮಿತಿಯು ಕಾರ್ಮಿಕರು ಮತ್ತು ಮಾಲಿಕರ ನಡುವೆ ಸೌಹಾರ್ದತೆ, ಉತ್ತಮ ಬಾಂಧವ್ಯ ಮತ್ತು ಸಂಬಂಧಗಳನ್ನು ಕಾಪಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಸೆಕ್ಷನ್ 9ಸಿ ಅನುಸಾರ 20ಕ್ಕೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕೈಗಾರಿಕೆಗಳಲ್ಲಿ ಕಾರ್ಮಿಕರಿಗಾಗಿ ಒಂದು ಅಥವಾ ಹೆಚ್ಚಿನ ಸಂಖ್ಯೆಯ ಕುಂದುಕೊರತೆ ನಿವಾರಣಾ ಸಮಿತಿ ಕಡ್ಡಾಯವಾಗಿ ಇರಬೇಕು.ಈ

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014/ 9483191035

ಸಮಿತಿಯಲ್ಲಿ ಮಾಲಿಕರ ಮತ್ತು ಕಾರ್ಮಿಕರ ಪ್ರತಿನಿಧಿಗಳು ಸಮಸಂಖ್ಯೆಯಲ್ಲಿ ಇರಬೇಕು. ಯಾವುದೇ ವ್ಯಕ್ತಿಗತ ಕುಂದುಕೊರತೆಗಳನ್ನು ಈ ಸಮಿತಿಯು ಆಲಿಸಿ ಪರಿಹಾರ ಸೂಚಿಸಬೇಕು. ಆದರೆ ಈ ಕಾರ್ಖಾನೆಯಲ್ಲಿ ಈ ಯಾವುದೇ ನಿಯಮಗಳನ್ನು ಪಾಲಿಸಲಾಗಿಲ್ಲ.

ಎಫ್. *ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು* : ಈ ಕಾರ್ಖಾನೆಯಲ್ಲಿ ಮಹಿಳೆಯರು ಸಂಜೆ 6 ರಿಂದ ಬೆಳಿಗ್ಗೆ 6ರವರೆಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಾರೆ ಎಂದು ನಮಗೆ ಮಾಹಿತಿ ದೊರೆತಿದೆ. 20–11.2019ರಂದು ಸರ್ಕಾರ ಹೊರಡಿಸಿದ ಅಧಿಸೂಚನೆಯ ಅನುಸಾರ, ಈ ಕೆಳಕಂಡ ಷರತ್ತುಗಳಿಗೆ ಬದ್ಧವಾಗಿ, ಈ ನಿಯಮಗಳನ್ನು ಅನುಸರಿಸಿದಲ್ಲಿ ಮಾತ್ರವೇ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಬಹುದಾಗಿದೆ. ಆದರೆ ಇದಾವುದನ್ನೂ ಇಲ್ಲಿ ಪಾಲಿಸಲಾಗಿಲ್ಲ :

- ಮನೆಯಿಂದ ಕಾರ್ಖಾನೆಗೆ ಕರೆದೊಯ್ಯಲು ವಾಹನ ಸೌಲಭ್ಯ, ಸಿಸಿಟಿವಿ ಕ್ಯಾಮರಾದೊಂದಿಗೆ ಮತ್ತು ಭದ್ರತಾ ಸಿಬ್ಬಂದಿಯೊಂದಿಗೆ ಇರಬೇಕು.
- ಆರೋಗ್ಯಕರವಾದ ಮತ್ತು ಸ್ವಚ್ಛ ಪರಿಸ್ಥಿತಿ ಕೆಲಸದ ಸ್ಥಳದಲ್ಲಿ ಇರಬೇಕು.
- ಒಂದೊಂದು ಬ್ಯಾಚ್ ನಲ್ಲಿ ಗರಿಷ್ಟ 10 ಮಹಿಳಾ ಕಾರ್ಮಿಕರು ಮಾತ್ರ ಇರಬಹುದು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಒಟ್ಟು ಸಂಖ್ಯೆ ಒಟ್ಟಾರೆ ಸಿಬ್ಬಂದಿಯ 2/3ರಷ್ಟರ ನಿಗದಿತ ಸಂಖ್ಯೆಯನ್ನು ಮೀರುವಂತಿಲ್ಲ.
- ರಾತ್ರಿ ಪಾಳಿಯಲ್ಲಿ ಉಸ್ತುವಾರಿಯಲ್ಲಿರುವ ಮತ್ತು ಇತರ ಮೇಲ್ವಿಚಾರಕರ ಪೈಕಿ ಮೂರನೆ ಒಂದರಷ್ಟು ಮಹಿಳೆಯರು ಇರಬೇಕು.
- ರಾತ್ರಿ ಪಾಳಿಯಲ್ಲಿ ಕಾರ್ಖಾನೆಯ ಮಾಲೀಕರು ಕನಿಷ್ಟ ಇಬ್ಬರು ಮಹಿಳಾ ಮೇಲ್ವಿಚಾರಕರನ್ನು ನೇಮಿಸಬೇಕು. ಇವರು ವಿಶೇಷ ಕಲ್ಯಾಣ ಸಹಾಯಕರಾಗಿ ಕಾರ್ಯನಿರ್ವಹಿಸಬೇಕು. ಕಾರ್ಖಾನೆಯ ಪ್ರವೇಶ ದ್ವಾರ ಮತ್ತು ನಿರ್ಗಮ ದ್ವಾರದಲ್ಲಿ ಸೂಕ್ತ ಮಹಿಳಾ ಭದ್ರತೆಯನ್ನು ಒದಗಿಸಬೇಕು.
- ಒಂದು ವೇಳೆ ಊಟ, ವಸತಿ ಸೌಲಭ್ಯವಿದ್ದರೆ ಅದರ ಮೇಲ್ವಿಚಾರಣೆಯನ್ನು ಮಹಿಳೆಯರಿಗೇ ವಹಿಸಬೇಕು.
- ಕಾರ್ಖಾನೆಯ ಒಳಾಂಗಣದಲ್ಲಿ ಮಾತ್ರವೇ ಅಲ್ಲದೆ ಘಟಕದ ಸುತ್ತಮುತ್ತಲೂ ಸಹ ರಹಸ್ಯ ಕ್ಯಾಮರಾಗಳನ್ನು ಅಳವಡಿಸಬೇಕು. ಕನಿಷ್ಟ 45 ದಿನಗಳ ಕ್ಯಾಮರಾ ಚಿತ್ರಣವನ್ನು ಸಂಗ್ರಹಿಸಿಡಬೇಕು.
- ಒಂದು ಪಾಳಿಯಲ್ಲಿ ನೂರಕ್ಕೂ ಹೆಚ್ಚು ಮಹಿಳಾ ಕಾರ್ಮಿಕರು ಇದ್ದರೆ ತುರ್ತುಪರಿಸ್ಥಿತಿಯನ್ನು ಎದುರಿಸಲು ಪ್ರತ್ಯೇಕ ವಾಹನವನ್ನು ಸಿದ್ಧವಾಗಿಟ್ಟಿರಬೇಕು. ಗಾಯಗೊಂಡವರಿಗೆ, ಲೈಂಗಿಕ ದೌರ್ಜನ್ಯ, ಕಿರುಕುಳಕ್ಕೊಳಗಾದವರಿಗೆ ಈ ವಾಹನ ತಕ್ಷಣದ ಪರಿಹಾರ ಒದಗಿಸಲು ಸಜ್ಜಾಗಿರಬೇಕು.

# AICCTU

ALL INDIA CENTRAL COUNCIL OF TRADE UNIONS

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: **9243190014** / 9483191035


- ಮಹಿಳಾ ಕಾರ್ಮಿಕರನ್ನು ಬೆಳಗಿನ ಪಾಳಿಯಿಂದ ರಾತ್ರಿ ಪಾಳಿಗೆ ವರ್ಗಾಯಿಸಿದರೆ ಅಥವಾ ರಾತ್ರಿಯಿಂದ ಬೆಳಗಿನ ಪಾಳಿಗೆ ವರ್ಗಾಯಿಸಿದರೆ, ಆ ಮಹಿಳೆಯರಿಗೆ ಕನಿಷ್ಟ 12 ಗಂಟೆಗಳ ವಿಶ್ರಾಂತಿ ಸಮಯವನ್ನು ಒದಗಿಸಬೇಕು.
- ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು.
- ವಿಶ್ರಾಂತಿ ಕೊಠಡಿಗಳನ್ನು ಸಮರ್ಪಕವಾಗಿ ಒದಗಿಸಬೇಕು. ಮಹಿಳಾ ಕಾರ್ಮಿಕರಿಗೆ ಪ್ರತ್ಯೇಕ ಕ್ಯಾಂಟೀನ್ ಒದಗಿಸಬೇಕು.

ಜಿ. *ಕಾರ್ಮಿಕರು ಸಂಘಟಿತರಾಗಿಲ್ಲ* : 10 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಒಂದು ಉದ್ದಿಮೆಯಲ್ಲಿ ಕಾರ್ಮಿಕರ ಸಂಘಟನೆಯೊಂದು ಇಲ್ಲದಿರುವುದು ವಿಷಾದಕರ ಅಂಶ. ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಬಗ್ಗೆ ನಿಗಾ ವಹಿಸುವ ಸಲುವಾಗಿ ಮತ್ತು ಮಾಲಿಕ–ಕಾರ್ಮಿಕರ ನಡುವೆ ಯಾವುದೇ ಸಮಸ್ಯೆ ಉಂಟಾಗದಂತೆ ಎಚ್ಚರವಹಿಸಲು ಒಂದು ಬಲಿಷ್ಠ ಕಾರ್ಮಿಕ ಸಂಘಟನೆ ಅತ್ಯವಶ್ಯವಾಗಿರುತ್ತದೆ. ಸಂಘಟಿತರಾಗಿ ಸಾಮೂಹಿಕ ಪ್ರಾತಿನಿಧಿತ್ವ ಹೊಂದಿರುವುದು ಸಂವಿಧಾನ ವಿಧಿ 19–1–ಸಿ ಅನ್ವಯ ಕಾರ್ಮಿಕರ ಹಕ್ಕೂ ಆಗಿರುತ್ತದೆ. ಕಾರ್ಮಿಕರು ತಮ್ಮದೇ ಆದ ಸಂಘಟನೆಯನ್ನು ಹೊಂದುವ ಬಗ್ಗೆ ಕಾರ್ಮಿಕರಿಗೆ ಮಾಹಿತಿ ನೀಡಿ ಸೂಕ್ತ ಕ್ರಮಗಳನ್ನು ಕಾರ್ಮಿಕ ಇಲಾಖೆ ಕೈಗೊಳ್ಳಬೇಕು. ಸಂವಿಧಾನ ವಿಧಿ 19–1–ಸಿ ಮತ್ತು 21ರ ಅನ್ವಯ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ, ಕಾರ್ಮಿಕರು ಈ ಹಕ್ಕುಗಳನ್ನು ಪಡೆಯಲು ಇರುವ ಎಲ್ಲ ಅಡ್ಡಿ ಆತಂಕಗಳನ್ನೂ ನಿವಾರಿಸುವುದು ರಾಜ್ಯ ಸರ್ಕಾರದ ನೈತಿಕ ಹೊಣೆಯಾಗಿರುತ್ತದೆ.

ಹೆಚ್ : ಕಾರ್ಮಿಕ ಇಲಾಖೆಯ ವೈಫಲ್ಯವನ್ನು ತನಿಖೆಗೊಳಪಡಿಸಿ : 1948ರ ಕಾರ್ಖಾನೆಗಳ ಕಾಯ್ದೆ ಸೆಕ್ಷನ್ 9ರ ಅನ್ವಯ, ಇಲಾಖೆಯ ಪರಿಶೀಲನಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲ ಕಾರ್ಖಾನೆಗಳನ್ನೂ ಆಗಾಗ್ಗೆ ಪರಿಶೀಲಿಸಬೇಕಾಗುತ್ತದೆ. ಹಾಗೆಯೇ ವೇತನ ಪಾವತಿ ಕಾಯ್ದೆಯ ಸೆಕ್ಷನ್ 14 ಮತ್ತು ಕನಿಷ್ಟ ವೇತನ ಕಾಯ್ದೆ 1948ರ ಸೆಕ್ಷನ್ 19ರಲ್ಲಿ ಪರಿಶೀಲನಾಧಿಕಾರಿಗಳ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಈ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಖಾನೆ, ಉದ್ದಿಮೆಗಳ ಪರಿಶೀಲನೆ ನಡೆಸುವುದು, ಕಾನೂನು ಪಾಲನೆ ಮಾಡುತ್ತಿರುವುದನ್ನು ದೃಢಪಡಿಸಿಕೊಳ್ಳುವುದು ಕಾರ್ಮಿಕ ಇಲಾಖೆಯ ಕರ್ತವ್ಯವಾಗಿರುತ್ತದೆ. ಆದರೆ ಯಾವುದೇ ರೀತಿಯ ಪರಿಶೀಲನೆಯನ್ನು ಮಾಡಿದಂತೆ ತೋರುತ್ತಿಲ್ಲ. ಕಾರ್ಖಾನೆ ಮತ್ತು ಉದ್ದಿಮೆಗಳಲ್ಲಿ ಇಲಾಖೆಯ ಕಡೆಯಿಂದ ಪರಿಶೀಲನೆ ಮಾಡುವುದು ಅಧಿಕಾರಿಗಳ ಕರ್ತವ್ಯವಾಗಿದ್ದು ಈ ನಿಯಮಕ್ಕೆ ತಿಲಾಂಜಲಿ ನೀಡಲಾಗಿದೆ. ಇದನ್ನು ಕೂಡಲೇ ತನಿಖೆಗೊಳಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಐ : *ಕಂಪನಿಯ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳು* : ಗುತ್ತಿಗೆ ಕಾರ್ಮಿಕರನ್ನು ಹಿಂಬಾಗಿಲಿನಿಂದ ನೇಮಕ ಮಾಡಿಕೊಳ್ಳುವ ಮೂಲಕ ವಿಸ್ಟ್ರಾನ್ ಕಂಪನಿಯು ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ನಡೆದುಕೊಳ್ಳುತ್ತಿರುವುದು ಸ್ಪಷ್ಟವಾಗಿದ್ದು ಕಾರ್ಮಿಕರನ್ನು

# AICCTU

ALL INDIA CENTRAL COUNCIL OF TRADE UNIONS

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014/ 9483191035

ಶೋಷಣೆಗೊಳಪಡಿಸುತ್ತಿರುವುದು ದೃಢಪಟ್ಟಂತಾಗಿದೆ. ಅಷ್ಟೇ ಅಲ್ಲದೆ ಗುತ್ತಿಗೆ ಕಾರ್ಮಿಕ ( ನಿರ್ಬಂಧಕ ಮತ್ತು ನಿಷೇಧ) ಕಾಯ್ದೆ 1970ರ ಸೆಕ್ಷನ್ 21, ವಿಶೇಷವಾಗಿ ಸೆಕ್ಷನ್ 21(4)ರ ಅನ್ವಯ ಗುತ್ತಿಗೆದಾರರು ವೇತನ ಪಾವತಿ ಮಾಡದೆ ಇರುವುದರ ಬಗ್ಗೆ ಇರುವ ನಿಯಮಗಳನ್ನು ವಿಸ್ಟ್ರಾನ್ ಕಂಪನಿ ಉಲ್ಲಂಘಿಸಿದೆ. ಇದು ಕಾರ್ಮಿಕರ ಹಕ್ಕುಗಳ ಸ್ಪಷ್ಟ ನಿದರ್ಶನವಾಗಿದ್ದು ಕಾರ್ಮಿಕ ಇಲಾಖೆಯು ಈ ಉಲ್ಲಂಘನೆಯ ಬಗ್ಗೆ ಸೂಕ್ತ ತನಿಖೆ ನಡೆಸಬೇಕಿದೆ. ಈ ವಿಷಯದಲ್ಲಿ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಿದೆ.

ಜೆ : *ಕಾರ್ಮಿಕರ ವಿರುದ್ಧ ದಾಖಲಿಸಲಾಗಿರುವ ದೂರುಗಳು ಮತ್ತು ಕಾರ್ಮಿಕರ ಬಂಧನವನ್ನು ಕುರಿತು* : 150ಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಿರುವುದಾಗಿ ಹೇಳಲಾಗಿದೆ ಮತ್ತು ಇನ್ನೂ ಕೆಲವರನ್ನು ಬಂಧಿಸುವ ಸಾಧ್ಯತೆಗಳಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಡಿಸೆಂಬರ್ 12ರ ಘಟನೆಗಳು ಕಂಪನಿಯಲ್ಲಿ ಅನುಸರಿಸಲಾಗಿರುವ ಶೋಷಕ ನೀತಿಗಳ ಪರಿಣಾಮವಾಗಿದ್ದು, ಎಲ್ಲ ಕಾರ್ಮಿಕ ಕಾನೂನು ನಿಯಮಗಳನ್ನೂ ಉಲ್ಲಂಘಿಸಿ, ಬಡ ಕಾರ್ಮಿಕರ ಮೂಲ ವೇತನವನ್ನೂ ಪಾವತಿ ಮಾಡದೆ ಇರುವುದರಿಂದ ನೊಂದ ಶೋಷಿತ ಕಾರ್ಮಿಕರು ಈ ಕ್ರಮಕ್ಕೆ ಮುಂದಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಾರ್ಮಿಕರು ಅಸಹಾಯಕ ಪರಿಸ್ಥಿತಿಗೆ ದೂಡಲ್ಪಟ್ಟಿಟ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಕಾರ್ಮಿಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದು, ಕಾರ್ಮಿಕರನ್ನು ಬಂಧಿಸುವುದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡುವಂತೆ ಮಾಡುತ್ತದೆ. ರಾಜ್ಯ ಸರ್ಕಾರ ಇದನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗಾಗಿ ರಾಜ್ಯ ಸರ್ಕಾರವು ಕಾರ್ಮಿಕರ ವಿರುದ್ಧ ದಾಖಲಾಗಿರುವ ಎಲ್ಲ ದೂರುಗಳನ್ನು ಹಿಂಪಡೆಯಬೇಕು.

ಮೇಲಾಗಿ, ಈಗಾಗಲೇ ಬಂಧನಕ್ಕೊಳಗಾಗಿರುವ ಕಾರ್ಮಿಕರಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ ಎಲ್ಲ ಬಂಧಿತರ ಹೆಸರುಗಳನ್ನೂ ಬಹಿರಂಗಪಡಿಸಿ ಅವರ ಕುಟುಂಬಗಳಿಗೆ ಮಾಹಿತಿ ಸಲ್ಲಿಸಬೇಕಿದೆ.

- ಯಾವುದೇ ವ್ಯಕ್ತಿಯನ್ನು ಸೂಕ್ತ ಮಾಹಿತಿ ಮತ್ತು ಕಾರಣಗಳನ್ನು ನೀಡದೆ ಬಂಧಿಸಿ ಸೆರೆವಾಸದಲ್ಲಿರಿಸುವಂತಿಲ್ಲ ಎಂದು ಸಂವಿಧಾನ ವಿಧಿ 22ರಲ್ಲಿ ಹೇಳಲಾಗಿದೆ. ಬಂಧಿಸಿದ ಕೂಡಲೇ ಬಂಧನದ ಕಾರಣಗಳನ್ನು ಬಂಧಿತ ವ್ಯಕ್ತಿಗೆ ತಿಳಿಸುವುದೇ ಅಲ್ಲದೆ,. ಅವರಿಗೆ ಅವರ ಆಯ್ಕೆಯ ವಕೀಲರನ್ನು ಭೇಟಿಯಾಗಿ, ಕಾನೂನು ರಕ್ಷಣೆ ಪಡೆಯಲು ಅವಕಾಶ ಮಾಡಿಕೊಡಬೇಕು.
- ಭಾರತೀಯ ಅಪರಾಧ ಸಂಹಿತೆ, ಸಿಆರ್‌ಪಿಸಿ ಸೆಕ್ಷನ್ 50(2) ಅನ್ವಯ ಯಾವುದೇ ವ್ಯಕ್ತಿಯನ್ನು ಬಂಧಿಸಿದ ನಂತರ ಪೊಲೀಸರು ಆ ವ್ಯಕ್ತಿ ಸೂಚಿಸುವ ಮತ್ತೊಬ್ಬ ವ್ಯಕ್ತಿಗೆ ಬಂಧನದ ಕಾರಣಗಳನ್ನು ತಿಳಿಸಬೇಕು. ಪೊಲೀಸ್ ಠಾಣೆಯಲ್ಲಿನ ದಾಖಲಾತಿ ಪುಸ್ತಕದಲ್ಲಿ ಈ ಮಾಹಿತಿಯನ್ನು ನೀಡಿರುವುದನ್ನು ರಾಜ್ಯ ಸರ್ಕಾರ ರೂಪಿಸಿರುವ ನಿಯಮಗಳ ಅನುಸಾರ ನಮೂದಿಸಬೇಕು.

Central Office: U-90, Shakarpur, Delhi - 110092 ph: 011-22521067 e-mail: aicctu@gmail.com
State Office: 16/7, Muni Kadirappa Layout, Graphite India Road, Hoody, Bangalore - 560048
e-mail: aicctu.karnataka@yahoo.co.in Ph: 9243190014/ 9483191035


- ಸಿಆರ್‌ಪಿಸಿ ಸೆಕ್ಷನ್ 41 ಬಿ(ಬಿ) ಅನ್ವಯ ಯಾವುದೇ ವ್ಯಕ್ತಿಯನ್ನು ಬಂಧಿಸುವ ಪೊಲೀಸ್ ಅಧಿಕಾರಿಯು ಬಂಧನದ ಕಾರಣಗಳನ್ನೊಳಗೊಂಡ ಒಂದು ಟಿಪ್ಪಣಿಯನ್ನು ಸಿದ್ಧಪಡಿಸಬೇಕಾಗುತ್ತದೆ. ಆ ಟಿಪ್ಪಣಿಗೆ ಬಂಧಿತ ವ್ಯಕ್ತಿಯ ಕುಟುಂದ ಒಬ್ಬ ಸದಸ್ಯರು ಅಥವಾ ಸ್ಥಳೀಯ ಮಟ್ಟದ ಗೌರವಾನ್ವಿತ ವ್ಯಕ್ತಿಯೊಬ್ಬರು ಸಾಕ್ಷಿಯಾಗಿ ಸಹಿ ಮಾಡಬೇಕಾಗುತ್ತದೆ. ಇದನ್ನು ದೃಢೀಕರಿಸಿ ಬಂಧಿತ ವ್ಯಕ್ತಿಯೂ ಸಹಿ ಮಾಡಬೇಕಾಗುತ್ತದೆ. ಬಂಧಿತ ವ್ಯಕ್ತಿಯ ಕುಟುಂಬದ ಸದಸ್ಯರು ಟಿಪ್ಪಣಿಗೆ ಸಹಿ ಮಾಡದೆ ಇದ್ದ ಪಕ್ಷದಲ್ಲಿ, ಅವರು ಸೂಚಿಸುವ ಯಾವುದೇ ಒಬ್ಬ ಸಂಬಂಧಿತ ವ್ಯಕ್ತಿಗೆ ಬಂಧನದ ಸುದ್ದಿಯನ್ನು ತಲುಪಿಸಬೇಕಾಗುತ್ತದೆ.
- ಸಿಆರ್‌ಪಿಸಿ ಸೆಕ್ಷನ್ 41, 41 ಎ, 41 ಡಿ, 50 ಎ, 57 ಮತ್ತು 60 ಎ ಈ ನಿಯಮಗಳನ್ನೂ ಕಡ್ಡಾಯವಾಗಿ ಅನುಸರಿಸಬೇಕಿದೆ.

ಅಂತಿಮವಾಗಿ, 1945ರ ನವಂಬರ್ 26ರಂದು ನಡೆದ ಕಾರ್ಮಿಕ ಸಮಾವೇಶದಲ್ಲಿ, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅವರು ಆಡಿದ ಈ ಮಾತುಗಳನ್ನು ಇಲ್ಲಿ ಉದ್ಧರಿಸಲು ಇಚ್ಚಿಸುತ್ತೇವೆ :

" ಲಾಭಾಂಶವು ಒಬ್ಬ ಖಾಸಗಿ ವ್ಯಕ್ತಿಗಷ್ಟೇ ಸಲ್ಲುವ ಒಂದು ಅರ್ಥವ್ಯವಸ್ಥೆಯಲ್ಲಿ ಕಾರ್ಮಿಕರ ಜೀವನಮಟ್ಟವನ್ನು ಕಡಿಮೆ ಮಾಡಲು ಅಪೇಕ್ಷಿಸುವುದು ಹೇಗೆ ಸಾಧ್ಯ ? ,,,ಈ ಸಮಸ್ಯೆಯನ್ನು ನಿವಾರಿಸಲು ನಾವು ಕೂಡಲೇ ಕ್ರಮ ಕೈಗೊಳ್ಳಬೇಕು, ಕಾರ್ಮಿಕರ ಜೀವನ ಗುಣಮಟ್ಟವನ್ನು ಕುಸಿಯದಂತೆ ತಡೆಗಟ್ಟಲು ಕ್ರಮ ಜರುಗಿಸಬೇಕು. ಈ ಸಂದರ್ಭದಲ್ಲಿ ಮೂರು ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ ಹೆಚ್ಚಿನ ಜನರಿಗೆ ಉದ್ಯೋಗ ಒದಗಿಸುವ ಸಲುವಾಗಿ ದುಡಿಮೆಯ ಅವಧಿಯನ್ನು ಕಡಿಮೆ ಮಾಡಬೇಕು. ಎರಡನೆಯದು, ವೇತನ ನಿಗದಿಪಡಿಸಲು ಒಂದು ಸೂಕ್ತ ಆಡಳಿತ ಯಂತ್ರವನ್ನು ರೂಪಿಸಬೇಕು. ಇದು ಇಲ್ಲದಿರುವುದರಿಂದಲೇ ಕಾರ್ಮಿಕರ ಜೀವನಮಟ್ಟ ಕುಸಿಯುತ್ತದೆ ಇದನ್ನು ತಡೆಗಟ್ಟಬೇಕಿದೆ. ಮೂರನೆಯದಾಗಿ, ಮಾಲಿಕರಿಗೆ ಮತ್ತು ಕಾರ್ಮಿಕರಿಗೆ ಮಾತುಕತೆ ನಡೆಸಲು, ಸಾಮೂಹಿಕ ಚೌಕಾಸಿಗಾಗಿ, ತಮ್ಮ ಸಮಸ್ಯೆಗಳನ್ನು ಪರಸ್ಪರ ಚರ್ಚೆಯ ಮೂಲಕ ನಿವಾರಿಸಿಕೊಳ್ಳಲು ಅನುಕೂಲವಾಗುವಂತಹ ವ್ಯವಸ್ಥೆಯನ್ನು ರೂಪಿಸಬೇಕು. ಇದನ್ನು ಸಾಧಿಸಬೇಕೆಂದರೆ ಒಂದು ಬಲಿಷ್ಟ ಮತ್ತು ಜವಾಬ್ದಾರಿಯುತ ಕಾರ್ಮಿಕ ಸಂಘಟನೆ ಇರುವುದು ಅತ್ಯವಶ್ಯ ಎಂದು ಭಾವಿಸುತ್ತೇನೆ. "

ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಈ ಕ್ರಮಗಳು ಅತ್ಯವಶ್ಯವಾಗಿದ್ದು ತನ್ಮೂಲಕ ಕೈಗಾರಿಕಾ ವಲಯದಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಪಾಡಲು ಸಾಧ್ಯವಿದೆ.

–0–0–0–